ಮಂಗಳೂರು–ಕೇರಳ ರಸ್ತೆ ವಾಹನ ಅಪಘಾತಗಳು.

೨೬೦೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಕನಕಪಾಡಿಯಿಂದ ಕೇರಳದ ಗಡಿ ತಲಪಾಡಿವರೆಗಿನ ೧೬ ಕಿ. ಮೀ. ಹೆದ್ದಾರಿಯಲ್ಲಿ ೧೯೮೪–೮೫ರ ೧೯೮೫–೮೬ ಹಾಗೂ ೧೯೮೬–೮೭ನೇ ಡಿಸೆಂಬರ್‌ವರೆಗೆ ನಡೆದ ವಾಹನ ಅಪಘಾತಗಳೆಷ್ಟು ?

ಆ) ಇದರಿಂದ ಆದ ಜೀವ ಹಾನಿಯೆಷ್ಟು ಹಾಗೂ ಶೀವ್ರತರ ಗಾಯಗೊಂಡವರೆಷ್ಟು ?

ಇ) ಹಾನಿಯಾದವರಿಗೆ ಕೊಟ್ಟ ಪರಿಹಾರವೇನು ?

ಈ) ಈ ಸಣ್ಣ ದೂರದ ರಸ್ತೆಯ ವಾಹನ ಅಪಘಾತಗಳನ್ನು ತಪ್ಪಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೪–೮೫ ೨೬ ಪ್ರಕರಣಗಳು
೧೯೮೫–೮೬ ೨೮ ಪ್ರಕರಣಗಳು
೧೯೮೬–೮೭ ೩೮ ಪ್ರಕರಣಗಳು
೧೯೮೭–೮೮ ೩೨ ಪ್ರಕರಣಗಳು

(೧–೪–೮೭ ರಿಂದ ೩೧–೧೨–೮೭ರವರೆಗೆ)

	ಸತ್ತವರು	ಗಾಯಗೊಂಡವರು
೧೯೮೪–೮೫	೮	೪
೧೯೮೫–೮೬	೯	೮
೧೯೮೬–೮೭	೧೦	೮
೧೯೮೭–೮೮	೯	೫

(೩೧–೧೨–೮೭ರವರೆಗೆ)

ಇ) ವಿಮಾ ಕಂಪನಿಯು ಪರಿಹಾರ ಧನವನ್ನು ಕೊಡುತ್ತದೆ.

ಈ) ೧) ಮೋಟಾರು ವಾಹನಗಳ ಅಧಿನಿಯಮ ಮತ್ತು ನಿಯಮಗಳ ಉಲ್ಲಂಘನೆಯಿಂದಾದ ಪ್ರಕರಣಗಳನ್ನು ಪತ್ತೆ ಮಾಡಲು ವ್ಯವಸ್ಥಿತ ನಿರಂತರ ವಾಹನ ತಪಾಸಣೆ ಕಾರ್ಯವನ್ನು ಕೈಗೊಳ್ಳಲಾಗಿದೆ.

೨) ಸಾಮಾನ್ಯವಾಗಿ ವಾಹನ ಅಪಘಾತಗಳಾಗುವ ಸ್ಥಳಗಳಲ್ಲಿ ರಸ್ತೆ ಸಂಚಾರಿ ಸಿಗ್ನಲ್ ಗಳನ್ನು ನೆಡಲಾಗಿದೆ.

ಸರೋಜಿನಿ ಮಹಿಷಿಯವರ ವರದಿ.

೨೩೫೪. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀಮತಿ ಸರೋಜಿನಿ ಮಹಿಷಿಯವರ ವರದಿ ಯಾವ ಹಂತದಲ್ಲಿದೆ ?

ಆ) ಸದರಿ ವರದಿಯನ್ನು ಶೀಘ್ರವಾಗಿ ಜಾರಿಗೊಳಿಸಲಾಗುವುದೇ ?

ಇ) ಹಾಗಿಲ್ಲದಿದ್ದಲ್ಲಿ ಅದರ ಜಾರಿಗೆ ಇರುವ ಅಡೆತಡೆಗಳೇನು ?

ಈ) ಈ ವರದಿಯ ಬಗ್ಗೆ ಸರ್ಕಾರದ ನಿಲುವೇನು ?